**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ 702/2017
ಸಿಡಬ್ಲೂ-9
ಪಿ.ಡಬ್ಲ್ಯೂ-7

ಸಾಕ್ಷಿದಾರನ ಹೆಸರು ಃ ಮರೆವ್ವ ಕಿರದಳ್ಳಿ ಉರ್ಪ ಹರಿಜನ

ಗಂಡನ ಹೆಸರು ಃ ಭೀಮಪ್ಪ

ವಯಸ್ಸು ಃ 65 ವರ್ಷ,

ಉದ್ಯೋಗ : ಮನೆಗೆಲಸ

ವಾಸಸ್ಥಳ ಃ ಪತ್ತೇಪೂರ

(ದಿಃ07/08/2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಮೃತ ಭೀಮಪ್ಪ ಇವರು ನನಗೆ ಗಂಡನಾಗಬೇಕು. ಸುಮಾರು 5-6 ವರ್ಷಗಳ ಹಿಂದೆ ನನ್ನ ಗಂಡ ಸೈದಾಪೂರ ಮುತ್ಯಾನ ಜಾತ್ರೆಗೆ ಹೋಗಿದ್ದರು. ಆಗ ನನ್ನ ಗಂಡನಿಗೆ ರಸ್ತೆ ಅಪಘಾತವಾಗಿ ಅವರು ಸ್ಥಳದಲ್ಲಿಯೇ ತೀರಿಹೋಗಿರುವ ವಿಷಯ ನನಗೆ ಗೊತ್ತಾಗಿರುತ್ತದೆ. ನಾನು ಆ ಸಮಯದಲ್ಲಿ ಪತ್ತೇಪೂರ ಗ್ರಾಮದಲ್ಲಿ ಇದ್ದೆ. ನಂತರ ನಾನು ನನ್ನ ಗಂಡನನ್ನು ಹೋಗಿ ನೋಡಲಾಗಿ ಆತನ ಕೈ ಮತ್ತು ಕಾಲುಗಳು ಮುರಿದಿದ್ದವು. ಘಟನೆ ಹೇಗೆ ಸಂಭವಿಸಿತು ಎಂದು ನಾನು ಯಾರನ್ನೂ ವಿಚಾರಿಸಿರುವುದಿಲ್ಲ. ಅಪಘಾತಪಡಿಸಿದ ವ್ಯಕ್ತಿಯ ಹೆಸರು ರಂಜಾನಸಾಬ ಎಂದು ಆಮೇಲೆ ನನಗೆ ಗೊತ್ತಾಗಿರುತ್ತದೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಪೋಲಿಸರು ನಮ್ಮ ಹತ್ತಿರ ಎರಡು ಬಾರಿ ಬಂದಿದ್ದರು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸ ಸ ಅ ಅವರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿ ಅಂತಾ ಪರಿಗಣಿಸಿ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ ಸ ಅ ಅವರಿಂದ**

ದಿಃ 16.7.2017 ರಂದು ನನ್ನ ಮಗ ಶರಣಪ್ಪನಿಗೆ ನನ್ನ ಮಗಳು ಫೋನ ಮಾಡಿ ಗುಂಡಕನಾಳ ಗ್ರಾಮದಲ್ಲಿ ನನ್ನ ಗಂಡನಿಗೆ ಜೀಪ ಹಾಯ್ದು ಅಪಘಾತಪಡಿಸಿದ ಕಾರಣ ನನ್ನ ಗಂಡ ತೀರಿಹೋಗಿರುತ್ತಾನೆ ಎಂದು ತಿಳಿಸಿರುತ್ತಾಳೆ ಎಂದರೆ ಸರಿ. ನನ್ನ ಗಂಡ ತೀರಿಹೋದ ವಿಷಯ ಗೊತ್ತಾಗಿ ನಾನು, ಚಾಸಾ 10 ಮತ್ತು 11 ರವರು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ನನ್ನ ಗಂಡನ ಶವ ಅಲ್ಲೆ ಇತ್ತು ಎಂದರೆ ಸರಿ. ನಂತರ ಅಲ್ಲೆ ಇದ್ದ ಯಮನಪ್ಪ ಹರಿಜನ ಇವರನ್ನು ನಾನು ವಿಚಾರಿಸಲು ಅವರು ನಿನ್ನ ಗಂಡ, ನಾನು ಮತ್ತು ರಾಮಚಂದ್ರ ಕೂಡಿ ಸೈದಪ್ಪ ಮುತ್ತ್ಯಾನ ಗುಡಿಗೆ ಹೋಗಿ ಮರಳಿ ಬರುವಾಗ ಒಂದು ಜೀಪನ್ನು ಅದರ ಚಾಲಕನು ಜೋರಾಗಿ ರಿವರ್ಸ ನಡೆಸಿಕೊಂಡು ಬಂದು ನಿನ್ನ ಗಂಡನಿಗೆ ಡಿಕ್ಕಿ ಹೊಡೆಸಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜೀಪನ ಚಾಲಕ ನನ್ನ ಗಂಡನಿಗೆ ಡಿಕ್ಕಿ ಪಡಿಸಿದ ನಂತರ ಜೀಪನ್ನು ಘಟನಾ ಸ್ದಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಭಾರಿ ಪ್ರಮಾಣದ ಗಾಯಗಳಾದ ಕಾರಣ ಅವರು ಸ್ಥಳದಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅಪಘಾತ ನಡೆದಾಗ ಸಂಜೆ 5.30 ಆಗಿತ್ತು ಎಂದರೆ ಸರಿ. ನಂತರ ನನ್ನ ಮಗ ದೂರನ್ನು ದಾಖಲಿಸಿರುತ್ತಾನೆ ಎಂದರೆ ಸರಿ. ಪೋಲಿಸರು ಆರೋಪಿತನನ್ನು ನನಗೆ ಠಾಣೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಎಲ್ಲವೂ ಮುಗಿದ ಮೇಲೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ವಾಹನ ಸಂಖ್ಯೆ ಕೆಎ 28 ಎ 0615 ಎಂದು ಇತ್ತು ಎಂದರೆ ನನಗೆ ಗೊತ್ತಿಲ್ಲ.

**<u>ಪಾಟಿ ಸವಾಲುಃ ಆರೋಪಿ ಪರವಾಗಿ ಶ್ರೀ ಆರ್ ವಾಯ್ ಎನ್ ವಕೀಲರಿಂದ</u>**

ನಾನು ಖಾಯಂ ತರೀಖ ಪತ್ತೇಪೂರ ಗ್ರಾಮದಲ್ಲಿ ವಾಸ ಮಾಡುತ್ತೇನೆ. ನ್ಯಾಯಾಲಯದ ಮುಂದೆ ಈ ದಿನ ಸಾಕ್ಷಿ ಹೇಳಲು ಯಾರು ಮಾಹಿತಿ ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ನನಗೆ ಏನು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನೆಯ ಕುರಿತು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ಗಂಡ ಹೇಗೆ ತೀರಿಕೊಂಡಿರುತ್ತಾರೆ ಎಂದು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ

ಸರಿ. ನನ್ನ ಗಂಡನ ಶವವನ್ನು ನಮ್ಮೂರಿಗೆ ತಂದಾಗಲೇ ನನ್ನ ಗಂಡ ತೀರಿಹೋದ ವಿಷಯ ನನಗೆ ಗೊತ್ತಾಗಿರುತ್ತದೆ. ನನ್ನ ಗಂಡನಿಗೆ ಕುಡಿತದ ಅಭ್ಯಾಸ ಇರಲಿಲ್ಲ. ನಾನು ಪೋಲಿಸರಿಗೆ ಮಾಹಿತಿ ಮತ್ತು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಯಾರು ವಾಹನ ಹಾಯಿಸಿ ಅಪಘಾತಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಅಪಘಾತಕ್ಕೀಡಾದ ವಾಹನದ ಸಂಖ್ಯೆ ಗೊತ್ತಿರುವುದಿಲ್ಲ ಎಂದರೆ ಸರಿ. ಆರೋಪಿತನ ವಿರುದ್ಧ ಸಲ್ಲಿಸಿದ ದೂರು ಸುಳ್ಳು ಇರುತ್ತದೆಯೋ ಅಥವಾ ನಿಜ ಇರುತ್ತದೆಯೋ ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ಘಟನೆ ನಡೆದ ನಂತರ ನಾವು ಪೋಲಿಸ ಠಾಣೆಗೆ ಹೋಗಿರುವುದಿಲ್ಲ ಮತ್ತು ಪೋಲಿಸರು ಸಹ ನಮ್ಮ ಹತ್ತಿರ ಬಂದಿರುವುದಿಲ್ಲ ಎಂದರೆ ಸರಿ. ಪರಿಹಾರಧನ ಪಡೆಯುವಗೋಸ್ಕರ ಆರೋಪಿತನ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.